# ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ, 1986.

## ಪ್ರಕರಣಗಳ ಕ್ರಮಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

**ಅಧ್ಯಾಯ I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.

**ಅಧ್ಯಾಯ II**

**ಪ್ರಾಧಿಕಾರದ ರಚನೆ**

3. ಪ್ರಾಧಿಕಾರದ ರಚನೆ.
4. ಪ್ರಾಧಿಕಾರದ ಸ್ವರೂಪ.
5. ಪ್ರಾಧಿಕಾರದ ಸದಸ್ಯತ್ವಕ್ಕೆ ಅನರ್ಹತೆಗಳು.
6. ಪದಾವಧಿ ಮತ್ತು ಸೇವಾ ಷರತ್ತುಗಳು.
7. ಸದಸ್ಯನನ್ನು ತೆಗೆದುಹಾಕುವುದು.
8. ಆಕಸ್ಮಿಕ ರಿಕ್ತತೆಗಳು.
9. ಪ್ರಾಧಿಕಾರದ ಸಭೆಗಳು.
10. ಪ್ರಾಧಿಕಾರದಪ್ರಕಾರ್ಯಗಳು.
11. ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರ ಅಧಿಕಾರಿಗಳು.

**ಅಧ್ಯಾಯ III**

**ನಿಧಿಗಳು**

**ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ**

12. ಪ್ರಾಧಿಕಾರದ ನಿಧಿಗಳು.
13. ಪ್ರಾಧಿಕಾರದ ಆಯವ್ಯಯ.
14. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.
15. ವಾರ್ಷಿಕ ವರದಿ.

**ಅಧ್ಯಾಯ IV**

**ದಂಡಗಳು**

16. ದಂಡಗಳು.
17. ಅಪರಾಧಗಳ ದುಷ್ಪ್ರೇರಣೆ.
18. ಪ್ರತಿಷೇಧಿತವಲ್ಲದ ಇತರ ಕಾನೂನುಗಳ ಅಡಿಯಲ್ಲಿ ಶಿಕ್ಷೆ.
19. ಅಪರಾಧಗಳ ರಾಜಿ.
20. ಮೀನುಗಾರಿಕೆ ಬಂದರು ಸರಹದ್ದಿನಲ್ಲಿ ಅಪರಾಧವೆಸಗುವ ವ್ಯಕ್ತಿಯನ್ನು ಹೊರದೂಡುವ ಮತ್ತು ಅಭಿರಕ್ಷೆಗೆ ತೆಗೆದುಕೊಳ್ಳುವ ಅಧಿಕಾರ.

**ಅಧ್ಯಾಯ V**

**ಸಂಕೀರ್ಣ**

21. ಲೋಕ ನೌಕರರಾಗಿ ಪ್ರಾಧಿಕಾರದ ಸದಸ್ಯರು ಮತ್ತು ಸಿಬ್ಬಂದಿ ವರ್ಗ.
22. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ.
23. ಭೂ ಕಂದಾಯದ ಬಾಕಿಯಂತೆ ಬಾಕಿಗಳ ವಸೂಲಿ.
24. ಕಂಪನಿಗಳಿಂದ ಅಪರಾಧಗಳು.
25. ಡೆಪ್ಯುಟಿ ಕಮೀಷನರಿಗೆ ಅಪೀಲು.
26. ಪರಿಷ್ಕರಣೆ.
27. ವಿನಿಯಮಗಳು.
28. ರಾಜ್ಯ ಸರ್ಕಾರದಿಂದ ಸೂಚನೆಗಳು.
29. ಉಳಿಸುವಿಕೆಗಳು.
30. ನಿಯಮ ರಚನಾಧಿಕಾರ.


* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1990ರ ಅಧಿನಿಯಮ 15.-** ಮೀನುಗಾರಿಕೆ ಬಂದರುಗಳು ಪೂರ್ಣಗೊಂಡ ನಂತರ, ರಾಜ್ಯ ಸರ್ಕಾರಗಳು ಮೀನುಗಾರಿಕೆ ಬಂದರುಗಳ ಸೂಕ್ತ ನಿರ್ವಹಣೆಗೆ ಹಾಗೂ ವ್ಯವಸ್ಥೆಗಾಗಿ ಮತ್ತು ರೇವು ಬಾಕಿ ಹಣ ಮತ್ತು ಇತರ ಚಾರ್ಜುಗಳನ್ನು ವಿಧಿಸುವುದಕ್ಕೆ ಮತ್ತು ವಸೂಲಿ ಮಾಡುವುದಕ್ಕೆ ಒಂದು ಸೂಕ್ತ ಸಾಧನವನ್ನು ಅಳವಡಿಸಬೇಕೆಂದು ಭಾರತ ಸರ್ಕಾರವು ಶಿಫಾರಸು ಮಾಡಿದೆ. ಆದ್ದರಿಂದ, ಕೇಂದ್ರಸರ್ಕಾರವು ಮೀನುಗಾರಿಕೆ ಕಾರ್ಯ ಚಟುವಟಿಕೆಗಳ ವ್ಯವಸ್ಥೆ ಮತ್ತು ಮೇಲ್ವಿಚಾರಣೆಗಾಗಿ ಮೀನುಗಾರಿಕೆ ಬಂದರು ಸರಹದ್ದು (ಟರ್ಮಿನಲ್) ಪ್ರಾಧಿಕಾರಗಳ ರಚನೆಗೆ ಶಿಫಾರಸು ಮಾಡಿದೆ. ಆದ್ದರಿಂದ, ರಾಜ್ಯ ಸರ್ಕಾರವು ರಾಜ್ಯದಲ್ಲಿ ಮೀನುಗಾರಿಕೆ ಬಂದರು ಸರಹದ್ದುಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಒಂದು ಮೀನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರವನ್ನು ರಚಿಸಲು ತೀರ್ಮಾನಿಸಿದೆ. ಪ್ರಾಧಿಕಾರದ ಮುಖ್ಯಪ್ರಕಾರ್ಯಗಳು ಈ ಮುಂದಿನಂತಿವೆ: -

1) ಮೀನು ಹಿಡಿಯುವ ಬಂದರು ಸರಹದ್ದುಗಳನ್ನು ಅಭಿವೃದ್ಧಿಗೊಳಿಸುವುದು, ಸಂರಕ್ಷಿಸುವುದು, ಕ್ರಮಬದ್ಧಗೊಳಿಸುವುದು ಮತ್ತು ನಿಯಂತ್ರಿಸುವುದು ;

2) ಮೀನು ಹಿಡಿಯುವ ಬಂದರು ಸರಹದ್ದು ವ್ಯಾಪ್ತಿಯೊಳಗೆ ಮೀನುಗಳನ್ನು ಶೀಘ್ರವಾಗಿ ಮತ್ತು ಆರೋಗ್ಯಕರವಾದ ರೀತಿಯಲ್ಲಿ ನಿರ್ವಹಿಸುವುದಕ್ಕೆ ವ್ಯವಸ್ಥೆಮಾಡುವುದು ;

3) ಬಂದರು ಸರಹದ್ದಿನಲ್ಲಿ ಸ್ಫೋಟಕ ಸಾಮಾಗ್ರಿಗಳ ಅನಧಿಕೃತ ಬಳಕೆಯನ್ನು ತಡೆಗಟ್ಟುವುದು ;

4) ಮೀನು ಹಿಡಿಯುವುದು, ಅದರ ಸಂರಕ್ಷಣೆ ಮತ್ತು ಶೇಖರಣೆ ಸೌಲಭ್ಯಗಳಿಗೆ ಪ್ರೋತ್ಸಾಹಿಸುವುದು;

5) ಇತರ ಸೌಲಭ್ಯಗಳಿಗಾಗಿ ಶುಲ್ಕಗಳನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.

ಆದ್ದರಿಂದ ಈ ವಿಧೇಯಕ.

(1986ರ ವಿಧಾನ ಸಭಾ ವಿಧೇಯಕ ಸಂಖ್ಯೆ 16 ಕಡತ ಸಂಖ್ಯೆ ಎಲ್ ಎ ಡಬ್ಲೂ 12 ಎಲ್ ಜಿ ಎನ್ 84ರಲ್ಲಿದ್ದಂತೆ)

**II**

**1993ರ ತಿದ್ದುಪಡಿ ಅಧಿನಿಯಮ 16.-**ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ, 1986ಕ್ಕೆ ಅನುಮತಿಯನ್ನು ನೀಡುವಾಗ್ಗೆ, ಭಾರತ ಸರ್ಕಾರದವರು ಕೆಳಕಂಡಂತೆ ತಿದ್ದುಪಡಿಯನ್ನು ಮಾಡಬೇಕೆಂದು ಕೋರಿದ್ದಾರೆ: -

(1) ರಾಜ್ಯದ ಯಾವುದಾದರೂ ದೊಡ್ಡ ಬಂದರಿನ ನಿಯಂತ್ರಣವನ್ನು ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ 1986ರ ವ್ಯಾಪ್ತಿಯಿಂದ ಹೊರತುಪಡಿಸುವುದು, ಮತ್ತು

(2) ಕರ್ನಾಟಕ ಮೀನುಗಾರಿಕೆ, ಬಂದರು ಸರಹದ್ದುಗಳು ಪ್ರಾಧಿಕಾರ ಅಧಿನಿಯಮ, 1986ರ 4ನೇ ಕಲಮಿನಡಿಯಲ್ಲಿ ರಚಿಸುವ ಬಂದರು ಸರಹದ್ದುಗಳ ಪ್ರಾಧಿಕಾರದಲ್ಲಿ ನೌಕಪಡೆಯ ಒಬ್ಬಪ್ರತಿನಿಧಿಯನ್ನು ಸೇರಿಸುವುದು.

ಆದ್ದರಿಂದ ಈ ವಿಧೇಯಕ.

(1993ರ ವಿಧಾನ ಸಭಾ ವಿಧೇಯಕ ಸಂಖ್ಯೆ 7 ರಲ್ಲಿದ್ದಂತೆ)

* * * *

## 1990ರ ಕರ್ನಾಟಕ ಅಧಿನಿಯಮ ಸಂಖ್ಯೆ 15

*(1990ರ ಜುಲೈ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲುಪ್ರಕಟವಾಗಿದೆ)*

## ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ, 1986

*(1990ರ ಏಪ್ರಿಲ್ 20ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)*

**(1993ರ ಅಧಿನಿಯಮ ಸಂಖ್ಯೆ 16ರಲ್ಲಿ ತಿದ್ದುಪಡಿ ಆದಂತೆ)**

ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ಬಂದರು ಸರಹದ್ದು (ಟರ್ಮಿನಲ್) ಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರವನ್ನು ರಚಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮೀನುಗಾರಿಕೆ ಬಂದರು ಸರಹದ್ದುಗಳ ರಚನೆ, ವ್ಯವಸ್ಥಿತ ಅಭಿವೃದ್ಧಿ ಮತ್ತು ಸಂರಕ್ಷಣೆ ಮತ್ತು ಅವುಗಳಿಗೆ ಆನುಷಂಗಿಕವಾದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು, ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ : -

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-**(1) ಈ ಅಧಿನಿಯಮವನ್ನು ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು ಮತ್ತು ಬೇರೆ ಬೇರೆಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವು ಅಧಿಸೂಚನೆ ಮೂಲಕ 1.1.2000ದಲ್ಲಿ ಜಾರಿಗೆ ಬಂದಿದೆ.

**2. ಪರಿಭಾಷೆಗಳು.-**ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು, -

(ಎ) `` ಪ್ರಾಧಿಕಾರ'' ಎಂದರೆ 3ನೇಪ್ರಕರಣದ ಅಡಿಯಲ್ಲಿ ರಚಿತವಾದ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ;

(ಬಿ) `` ಅಧ್ಯಕ್ಷ'' ಎಂದರೆ, ಪ್ರಾಧಿಕಾರದ ಅಧ್ಯಕ್ಷ ;

(ಸಿ) `` ಮೀನು'' ಎಂಬುದು ಸಮುದ್ರದಲ್ಲಿರುವ ಎಲ್ಲ ಜಲಚರ ಪ್ರಾಣಿಗಳು ಮತ್ತು ಸಸ್ಯಗಳು ಮತ್ತು ಅಳಿವೆಗಳನ್ನು ಒಳಗೊಳ್ಳುತ್ತದೆ ;

(ಡಿ) `` ಮೀನುಗಾರಿಕೆ ಬಂದರು ಸರಹದ್ದು '' ಎಂದರೆ, [1][ಬಂದರುಗಳ ಅಧಿನಿಯಮ, 1908 (1908ರ ಕೇಂದ್ರಾಧಿನಿಯಮ 15) ರ 3ನೇಪ್ರಕರಣದ (8)ನೇ ಖಂಡದಲ್ಲಿ ಪರಿಭಾಷಿಸಲಾದಂಥ ಇತರೆ ಮುಖ್ಯ ಬಂದರುಗಳ ಪರಿಮಿತಿಯಲ್ಲಿ ಬರುವಪ್ರದೇಶವನ್ನು ಹೊರತುಪಡಿಸಿ ರಾಜ್ಯ ಸರ್ಕಾರವು][1] ಮೀನುಗಾರಿಕೆ ಬಂದರು ಸರಹದ್ದುಪ್ರದೇಶವೆಂದು ಅಧಿಸೂಚಿಸಬಹುದಾದಂಥ ಯಾವುದೇಪ್ರದೇಶ ;

1. 1993ರ ಅಧಿನಿಯಮ ಸಂಖ್ಯೆ: 16ರ ಮೂಲಕ ದಿ:11.5.1993ರಿಂದ ಪ್ರತ್ಯಾಯೋಜಿಸಲಾಗಿದೆ.

### ಅಧ್ಯಾಯ II

### ಪ್ರಾಧಿಕಾರದ ರಚನೆ

**3. ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಕರ್ನಾಟಕದಾದ್ಯಂತ ಮೀನುಗಾರಿಕೆ ಬಂದರು ಸರಹದ್ದುಗಳನ್ನು ಅಭಿವೃದ್ಧಿಗೊಳಿಸಲು, ಸಂರಕ್ಷಿಸಲು ಮತ್ತು ಆಡಳಿತ ಮಾಡಲು ಪ್ರಾಧಿಕಾರವೊಂದನ್ನು ರಚಿಸಬಹುದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೊಳಪಡಬಹುದು.

(3) ಪ್ರಾಧಿಕಾರದ ಕೇಂದ್ರ ಕಚೇರಿಯು ಮಲ್ಪೆಯಲ್ಲಿರತಕ್ಕದ್ದು.

**4. ಪ್ರಾಧಿಕಾರದ ಸ್ವರೂಪ.-** ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕರ್ನಾಟಕ ರಾಜ್ಯದ ಮೀನುಗಾರಿಕೆ ಪ್ರಭಾರದಲ್ಲಿರುವ ಸಚಿವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಕರ್ನಾಟಕ ಸರ್ಕಾರದ ಮೀನುಗಾರಿಕೆ ನಿರ್ದೇಶಕರು, ಪದನಿಮಿತ್ತ ;

(ಸಿ) ಭಾರತ ಸರ್ಕಾರದ ಕೃಷಿ ಮಂತ್ರಾಲಯದಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ ;

(ಡಿ) ಕರ್ನಾಟಕ ಸರ್ಕಾರದ ಬಂದರು ಮತ್ತು ಒಳನಾಡು ಜಲ ಸಾರಿಗೆ ನಿರ್ದೇಶಕರು, ಪದನಿಮಿತ್ತ;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶಿಸಬಹುದಾದಂಥ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ಆರ್ಥಿಕ ಇಲಾಖೆಯ ಒಬ್ಬ ಅಧಿಕಾರಿ ;

(ಎಫ್) ಮೀನುಗಾರಿಕೆ ಪ್ರಭಾರದಲ್ಲಿರುವ ಉಪಕಾರ್ಯದರ್ಶಿ ;

(ಜಿ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು, ಅದರ ಅಧ್ಯಕ್ಷರು, ಪದನಿಮಿತ್ತ;

(ಎಚ್) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಕ್ರಯವಿಕ್ರಯ ಒಕ್ಕೂಟ, ಮಂಗಳೂರು ಅದರ ಅಧ್ಯಕ್ಷರು, ಪದನಿಮಿತ್ತ ;

(ಐ) ಉತ್ತರ ಕನ್ನಡ ಜಿಲ್ಲಾ ಮೀನು ಕ್ರಯವಿಕ್ರಯ ಒಕ್ಕೂಟ, ಕಾರವಾರ ಅದರ ಅಧ್ಯಕ್ಷರು, ಪದನಿಮಿತ್ತ

(ಜೆ) ಆಳ ಕಡಲು ಮೀನು ಹಿಡಿಯುವ ನೌಕೆಗಳ ಚಾಲಕರ ಪೈಕಿ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿ ;

(ಕೆ) ಮೀನು ವ್ಯಾಪಾರಿಗಳ ಪೈಕಿ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ ;

(ಎಲ್) ರಾಜ್ಯ ಸರ್ಕಾದಿಂದ ನಾಮನಿರ್ದೇಶಿತರಾದ ಬೆಸ್ತ ಮಹಿಳೆಯರ ಸಹಕಾರಿ ಸಂಘದ ಒಬ್ಬಪ್ರತಿನಿಧಿ;

[1][(ಎಲ್ಎ) ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ನೌಕಾದಳದ ಒಬ್ಬಪ್ರತಿನಿಧಿ;][1]

1. 1993ರ ಅಧಿನಿಯಮ ಸಂಖ್ಯೆ: 16ರ ಮೂಲಕ ದಿ:11.5.1993ರಿಂದ ಸೇರಿಸಲಾಗಿದೆ.

(ಎಮ್) ಮೀನುಗಾರಿಕೆಯಲ್ಲಿ ಹಿತಾಸಕ್ತಿಯುಳ್ಳ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳ ಪೈಕಿ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ ;

(ಎನ್) ಮೀನುಗಾರಿಕೆಯಲ್ಲಿ ಹಿತಾಸಕ್ತಿಯುಳ್ಳ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಇಬ್ಬರು ವ್ಯಕ್ತಿಗಳು;

(ಒ) ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರು ಪ್ರಾಧಿಕಾರದ ಕಾರ್ಯದರ್ಶಿಯಾಗಿರತಕ್ಕದ್ದು.

**5. ಪ್ರಾಧಿಕಾರದ ಸದಸ್ಯತ್ವಕ್ಕೆ ಅನರ್ಹತೆಗಳು.-** (1) ಒಬ್ಬ ವ್ಯಕ್ತಿಯು, -

(ಎ) ನೈತಿಕ ಅಧಃಪತನವನ್ನು ಒಳಗೊಂಡಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಂಥ ಒಂದು ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ ;

(ಬಿ) ಅಸ್ವಸ್ಥಚಿತ್ತದವನಾಗಿದ್ದು, ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ ;

(ಸಿ) ಅನನ್ಮುಕ್ತ ದಿವಾಳಿಯಾಗಿದ್ದರೆ ;

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮದ ಸೇವೆಯಿಂದ ಅಥವಾ ಪ್ರಾಧಿಕಾರದ ಸದಸ್ಯತ್ವದಿಂದ ತೆಗೆದುಹಾಕಲಾಗಿದ್ದರೆ ಅಥವಾ ವಜಾಮಾಡಲಾಗಿದ್ದರೆ;

(ಇ) ಪ್ರಾಧಿಕಾರದ ಆದೇಶದ ಮೂಲಕ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಂದಿಗೆ ಅಥವಾ ಅದರ ಮೇರೆಗೆ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ಯಾವುದೇ ಷೇರು ಅಥವಾ ಪಾಲನ್ನು ಸ್ವತಃ ತಾನು ಅಥವಾ ತನ್ನ ಪಾಲುದಾರನಿಂದ ನೇರವಾಗಿ ಅಥವಾ ಪರೋಕ್ಷವಾಗಿ ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ನ್ಯಾಯವಾದಿಯಾಗಿ ಉದ್ಯೋಗವನ್ನು ಹೊಂದಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧ ನ್ಯಾಯವಾದಿಯ ಉದ್ಯೋಗವನ್ನು ಅಂಗೀಕರಿಸಿದರೆ,

-ಸದಸ್ಯನಾಗಿ ನಾಮನಿರ್ದೇಶಿತನಾಗಲು ಮತ್ತು ಸದಸ್ಯನಾಗಲು ಅನರ್ಹನಾಗತಕ್ಕದ್ದು.

(2) ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಜಾಹೀರಾತನ್ನು ನೀಡಲಾಗಿರುವ ಯಾವುದೇ ಪತ್ರಿಕೆಯಲ್ಲಿ ಒಬ್ಬ ವ್ಯಕ್ತಿಯು ಷೇರು ಅಥವಾ ಹಿತಾಸಕ್ತಿ

ಹೊಂದಿರುವನೆಂಬ ಕಾರಣಕ್ಕೆ ಮಾತ್ರವೇ ಸದಸ್ಯತ್ವಕ್ಕೆ (1)ನೇ ಉಪ -ಪ್ರಕರಣದ (ಇ) ಖಂಡದ ಮೇರೆಗೆ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ಉದ್ಯೋಗದಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿರುವನೆಂದು ಭಾವಿಸತಕ್ಕದ್ದಲ್ಲ.

**6. ಪದಾವಧಿ ಮತ್ತು ಸೇವಾ ಷರತ್ತುಗಳು.-**(1) 7ನೇಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನಾಮನಿರ್ದೇಶಿತನಾದ ಪ್ರತಿಯೊಬ್ಬ ಸದಸ್ಯನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಅಧಿಕಾರದಲ್ಲಿರತಕ್ಕದ್ದು ಮತ್ತು ಅವರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ನಾಮನಿರ್ದೇಶಿತನಾದಪ್ರತಿಯೊಬ್ಬ ಸದಸ್ಯನು, ನಾಮನಿರ್ದೇಶನದ ದಿನಾಂಕದಿಂದ ಮೂರು ವರ್ಷಗಳವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು, ಆದರೆ, ಅವನು ಪುನರ್ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(3) ನಾಮನಿರ್ದೇಶಿತನಾದ ಪ್ರತಿಯೊಬ್ಬ ಸದಸ್ಯನು, ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರವನ್ನು ಸಂಬೋಧಿಸಿ ಪತ್ರ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು:

ಪರಂತು, ರಾಜೀನಾಮೆಯು ಅಂಗೀಕೃತವಾಗುವವರೆಗೂ, ಅದು ಪರಿಣಾಮಕಾರಿಯಾಗತಕ್ಕದ್ದಲ್ಲ.

**7. ಸದಸ್ಯನನ್ನು ತೆಗೆದುಹಾಕುವುದು. -**(1) ರಾಜ್ಯಸರ್ಕಾರವು, ನಾಮನಿರ್ದೇಶಿತ ಸದಸ್ಯನನ್ನು, -

(ಎ) ಅವನು, 4ನೇಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುವೇ ಅನರ್ಹತೆಗಳಿಗೆ ಒಳಗಾದರೆ ; ಅಥವಾ

(ಬಿ) ಕಾರ್ಯ ನಿರ್ವಹಣೆಯನ್ನು ನಿರಾಕರಿಸಿದರೆ ಅಥವಾ ಕಾರ್ಯ ನಿರ್ವಹಿಸಲು ಅಸಮರ್ಥನಾದರೆ ; ಅಥವಾ

(ಸಿ) ಪ್ರಾಧಿಕಾರದ ನಿರಂತರ ಮೂರು ಸಭೆಗಳಲ್ಲಿ ಅಧ್ಯಕ್ಷರ ಅನುಮತಿಯನ್ನು ಪಡೆಯದೆ ಗೈರು ಹಾಜರಾದರೆ; ಅಥವಾ

(ಡಿ) ತನ್ನ ಸ್ಥಾನದಲ್ಲಿ ಮುಂದುವರಿಯುವುದರಿಂದ ಪ್ರಾಧಿಕಾರದ ಹಿತಾಸಕ್ತಿಗೆ ಹಾನಿಯುಂಟಾಗುವಂತೆ ಅವನು ಆ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ,

-ತೆಗೆದುಹಾಕತಕ್ಕದ್ದು.

(2) ಯಾವೊಬ್ಬ ನಾಮನಿರ್ದೇಶಿತ ಸದಸ್ಯನಿಗೆ ಮನವಿಯನ್ನು ಸಲ್ಲಿಸಲು ಒಂದು ಅವಕಾಶ ಕೊಟ್ಟ ಹೊರತು, ಅಂಥ ಸದಸ್ಯನನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ತೆಗೆದುಹಾಕುವ ಆದೇಶವನ್ನು ಮಾಡತಕ್ಕದ್ದಲ್ಲ.

**8. ಆಕಸ್ಮಿಕ ರಿಕ್ತತೆಗಳು.-** (1) ಯಾವೊಬ್ಬ ಸದಸ್ಯನ ರಾಜೀನಾಮೆಯಿಂದ ಅಥವಾ ಇತರ ಯಾವುದೇ ಕಾರಣದಿಂದ ಉಂಟಾದ ಯಾವುದೇ ಆಕಸ್ಮಿಕ ರಿಕ್ತತೆಯನ್ನು ರಾಜ್ಯಸರ್ಕಾರವು ನಾಮನಿರ್ದೇಶನದ ಮೂಲಕ ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಯಾವ ಸದಸ್ಯನ ಸ್ಥಾನದಲ್ಲಿ ನಾಮನಿರ್ದೇಶಿತನಾಗಿರುವನೋ ಆ ಸದಸ್ಯನು ಅಧಿಕಾರವನ್ನು ಹೊಂದಿರುತ್ತಿದ್ದ ಅವಧಿಯವರೆಗೆ ತಾನು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು ಪ್ರಾಧಿಕಾರದ ಸದಸ್ಯತ್ವದಲ್ಲಿ ಯಾವುದೇ ರಿಕ್ತತೆ ಉಂಟಾಗಿದೆಯೆಂಬ ಅಥವಾ ಪ್ರಾಧಿಕಾರದ ರಚನೆ ಅಥವಾ ಪುನರ್ರಚನೆಯಲ್ಲಿ ಯಾವುದೇ ದೋಷ ಉಂಟಾಗಿದೆಯೆಂಬ ಅಥವಾ ಮೊಕದ್ದಮೆಯ ಗುಣಗಳ ಮೇಲೆ ಪ್ರಭಾವ ಬೀರುವಂಥ ಯಾವುದೇ ಅಕ್ರಮತೆಯು ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಉಂಟಾಗಿದೆಯೆಂಬ ಕಾರಣಮಾತ್ರದಿಂದಲೇ ಅನೂರ್ಜಿತವಾಗತಕ್ಕದ್ದಲ್ಲ.

**9. ಪ್ರಾಧಿಕಾರದ ಸಭೆಗಳು.-**(1) ಪ್ರಾಧಿಕಾರವು, ಕಡೇಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಾಮಾನ್ಯವಾಗಿ ಪ್ರಾಧಿಕಾರದ ಕಚೇರಿಯಲ್ಲಿ ಅಥವಾ ಅಧ್ಯಕ್ಷರು ನಿರ್ಧರಿಸಬಹುದಾದಂಥ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (2), (3) ಮತ್ತು (4)ನೇ ಉಪ -ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷರು ಅಥವಾ ಅವರ ಗೈರುಹಾಜರಿಯಲ್ಲಿ ಹಾಜರಿರುವ ಸದಸ್ಯರ ಪೈಕಿಯಿಂದ ಆಯ್ಕೆಯಾದ ಯಾವೊಬ್ಬ ಸದಸ್ಯನು, ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ರಾಜ್ಯ ಸರ್ಕಾರದ ಅಧಿಕಾರಿಯಾಗಿರುವ ಯಾವೊಬ್ಬ ಸದಸ್ಯನು, ಪ್ರಾಧಿಕಾರದ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಅವನು ಅಧ್ಯಕ್ಷರಿಗೆ ವಿಷಯವನ್ನು ತಿಳಿಸಿ ಸಭೆಗೆ ಹಾಜರಾಗಲು ತನ್ನ ನಿಕಟಾಧೀನ ಅಧಿಕಾರಿಯನ್ನು ಲಿಖಿತದಲ್ಲಿ ಪ್ರಾಧಿಕೃತಗೊಳಿಸಬಹುದು.

(4) ಪ್ರಾಧಿಕಾರದ ಸಭೆಯಲ್ಲಿ ಬಂದ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದ ಸದಸ್ಯರ ಬಹುಮತಗಳ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ ಅಧ್ಯಕ್ಷ ಅಥವಾ ಅವರ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ಸದಸ್ಯನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರುತ್ತಾನೆ.

(5) ಸಭೆಯ ಗಣಪೂರ್ತಿಯು ಏಳು ಮಂದಿ ಸದಸ್ಯರಿಂದಾಗತಕ್ಕದ್ದು.

**10. ಪ್ರಾಧಿಕಾರದ ಪ್ರಕಾರ್ಯಗಳು.-**ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು,

ಎಂದರೆ: -

(ಎ) ಮೀನುಗಾರಿಕೆ ಬಂದರು ಸರಹದ್ದನ್ನು ಅಭಿವೃದ್ಧಿಗೊಳಿಸುವುದು, ಸಂರಕ್ಷಿಸುವುದು, ಕ್ರಮಬದ್ಧಗೊಳಿಸುವುದು ಮತ್ತು ನಿಯಂತ್ರಿಸುವುದು ;

(ಬಿ) ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು;

(ಸಿ) ಮೀನುಗಾರಿಕೆ ಬಂದರು ಸರಹದ್ದುಗಳಿಗಾಗಿ ಭೂಮಿಯನ್ನು ಆರ್ಜಿಸುವುದು ಮತ್ತು ಸಲಕರಣೆಗಳು ಹಾಗೂ ಯಂತ್ರ ಸಾಮಗ್ರಿಗಳನ್ನು ಖರೀದಿಸುವುದು ;

(ಡಿ) ಮೀನುಗಾರಿಕೆ ಬಂದರು ಸರಹದ್ದಿನೊಳಗೆ ನೌಕೆಗಳು ಬರಲು ಮತ್ತು ಅಲ್ಲಿಂದ ಹೊರಡಲು ಸುರಕ್ಷಾ ಕ್ರಮಗಳನ್ನು ಮತ್ತು ಕಡಲ ತೀರಗಳಲ್ಲಿ ಅಳವಡಿಕೆಗಳನ್ನು ಒದಗಿಸುವುದು ;

(ಇ) ಮೀನುಗಾರಿಕೆ ಬಂದರು ಸರಹದ್ದುಗಳೊಳಗೆ ಮೀನುಗಳನ್ನು ಶೀಘ್ರವಾಗಿ ಮತ್ತು ಆರೋಗ್ಯಕರ ರೀತಿಯಲ್ಲಿ ನಿರ್ವಹಿಸುವುದಕ್ಕೆ ಏರ್ಪಾಟು ಮಾಡುವುದು ;

(ಎಫ್) ಹಾನಿಗೀಡಾದುದನ್ನು ಪುನಃ ಸ್ಥಾಪಿಸುವ ಕಾರ್ಯವೂ ಸೇರಿದಂತೆ ಎಲ್ಲ ಕೆಲಸಗಳನ್ನುನಿರ್ವಹಿಸುವುದು;

(ಜಿ) ಬಂದರು ಸರಹದ್ದುಗಳೊಳಗೆ ಸ್ಫೋಟಕ ವಸ್ತುಗಳ ಅನಧಿಕೃತ ಬಳಕೆಯನ್ನು ತಡೆಗಟ್ಟುವುದು ;

(ಹೆಚ್) ಬಂದರು ಸರಹದ್ದು ಆಡಳಿತ ವರ್ಗದ ಮೇಲ್ವಿಚಾರಣೆ ನಡೆಸುವುದು ;

(ಐ) ಮೀನು ಸಂಸ್ಕರಣೆ ಮತ್ತು ಶೇಖರಣಾ ಸೌಲಭ್ಯಗಳಿಗೆ ಪ್ರೋತ್ಸಾಹ ನೀಡುವುದು ;

(ಜೆ) ಬಂದರು ಸರಹದ್ದುಗಳ ಮೂಲಕ ಒದಗಿಸಲಾದ ಸೌಲಭ್ಯಗಳಿಗೆ ಶುಲ್ಕಗಳನ್ನು ವಿಧಿಸುವುದು

ಮತ್ತು ವಸೂಲಿ ಮಾಡುವುದು ;

(ಕೆ) ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಅವಶ್ಯವಿರುವಂಥ ಇತರ ಪ್ರಕಾರ್ಯಗಳನ್ನು ಮಾಡುವುದು ;

(ಎಲ್) ಮೀನು ಹಿಡಿಯುವ ನೌಕೆಗಳು, ಹಿಡಿದ ಮೀನಿನಪ್ರಮಾಣ, ದೋಣಿ ಬದಿಯ ಬೆಲೆಗಳು, ಸುಗ್ಗಿ ದರಗಳು, ರಫ್ತು ವೆಚ್ಚಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವುದು ; ಮತ್ತು

(ಎಂ) ರಾಜ್ಯ ಸರ್ಕಾರವು ಪ್ರಾಧಿಕಾರಕ್ಕೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳು.

**11. ವ್ಯವಸ್ಥಾಪಕ ನಿರ್ದೇಶಕರು ಮತ್ತು ಇತರ ಅಧಿಕಾರಿಗಳು.-**(1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಪ್ರಾಧಿಕಾರಕ್ಕೆ ಮೀನುಗಾರಿಕೆಗಳ ಸಹ ನಿರ್ದೇಶಕರ ದರ್ಜೆಯ ಅಧಿಕಾರಿಯೊಬ್ಬರನ್ನು ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸತಕ್ಕದ್ದು. ಅವನು, ಪ್ರಾಧಿಕಾರದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೊಳಪಟ್ಟಂತೆ ಪ್ರಾಧಿಕಾರವು ತನಗೆ ನಿಯಮಿಸಬಹುದಾದ ಅಥವಾ ಪ್ರತ್ಯಾಯೋಜಿಸಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಪ್ರಾಧಿಕಾರವು ತನ್ನಪ್ರಕಾರ್ಯಗಳ ಸಮರ್ಪಕ ನಿರ್ವಹಣೆಗೆ ಅದು ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಿಸಬಹುದು.

(3) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಧಿಕಾರಿಯ ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ನೇಮಿಸಲಾದ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತಿರತಕ್ಕದ್ದು.

(4) ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಪ್ರತಿಯೊಂದು ಮೀನುಗಾರಿಕೆ ಬಂದರು ಸರಹದ್ದುಗಳಿಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸಬಹುದು ಮತ್ತು ಅವನು, ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರಿಗೆ ಅಧೀನನಾಗಿರತಕ್ಕದ್ದು. ಆತನ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ನಿಯಮಿಸಬಹುದಾದಂತಿರತಕ್ಕದ್ದು.

## ಅಧ್ಯಾಯ III
## ನಿಧಿಗಳು
## ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**12. ಪ್ರಾಧಿಕಾರದ ನಿಧಿಗಳು.-** (1) ಪ್ರಾಧಿಕಾರವು ಒಂದುಪ್ರತ್ಯೇಕ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಅದಕ್ಕೆ, -

(ಎ) ಪ್ರಾಧಿಕಾರವು, ರಾಜ್ಯಸರ್ಕಾರದಿಂದ ಸಾಲ, ಅನುದಾನ, ಮುಂಗಡ ಅಥವಾ ಇತರ ರೀತಿಯಲ್ಲಿ ಸ್ವೀಕರಿಸಿದ ಎಲ್ಲ ಹಣಗಳು ;

(ಬಿ) ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳು ಮತ್ತು ಸಾಲಗಳು ; (ಸಿ) ಹಣಕಾಸು ಏಜೆನ್ಸಿಗಳಿಂದ ಪ್ರಾಧಿಕಾರವು ಎತ್ತಿದ ಸಾಲಗಳು ;

(ಡಿ) ವಿಧಿಸಲಾದ ಜುಲ್ಮಾನೆಗಳೂ ಸೇರಿದಂತೆ ಶುಲ್ಕಗಳು, ಬಾಡಿಗೆಗಳು ಮತ್ತು ವೆಚ್ಚಗಳ ಮೂಲಕ ಬಂದ ಸ್ವೀಕೃತಿಗಳು ;

(ಇ) ಇತರ ಯಾವುವೇ ಮೂಲದಿಂದ ಸ್ವೀಕರಿಸಲಾದ ಅಂಥ ಇತರ ಮೊತ್ತಗಳು ಮತ್ತು ನಿಧಿಗಳು,

-ಜಮೆಯಾಗತಕ್ಕದ್ದು.

**13. ಪ್ರಾಧಿಕಾರದ ಆಯವ್ಯಯ.-** ಪ್ರಾಧಿಕಾರವು,ಪ್ರತಿವರ್ಷವೂ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಕಾಲದಲ್ಲಿ ಅಧಿನಿಯಮವನ್ನು ಜಾರಿಗೊಳಿಸುವ ಸಂಬಂಧದಲ್ಲಿ ಪ್ರಾಧಿಕಾರದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ತೋರಿಸುವ ಮುಂದಿನ ಹಣಕಾಸು ವರ್ಷಕ್ಕಾಗಿ ಆಯವ್ಯಯ ಪಟ್ಟಿಯೊಂದನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಷ್ಟು ಸಂಖ್ಯೆಯ ಅದರ ಪ್ರತಿಗಳನ್ನು ರಾಜ್ಯ ಸರ್ಕಾರಕ್ಕೆ ಅಥವಾ ಅಂಥ ಇತರ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

**14. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-**(1) ಪ್ರಾಧಿಕಾರವು, ನಿಜವಾದ ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಡತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಜಮಾ ಖರ್ಚು ಪಟ್ಟಿಯೂ ಸೇರಿದಂತೆ ವಾರ್ಷಿಕ ಲೆಕ್ಕಪತ್ರ ವಿವರಣಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳು, ರಾಜ್ಯ ಲೆಕ್ಕ ಪತ್ರ ನಿಯಂತ್ರಕರ ವಾರ್ಷಿಕ ಲೆಕ್ಕ ಪರಿಶೋಧನೆಗೆ ಒಳಪಡತಕ್ಕದ್ದು ಮತ್ತು ರಾಜ್ಯ ಲೆಕ್ಕಪತ್ರ ನಿಯಂತ್ರಕರಿಂದ ಪ್ರಮಾಣೀಕೃತವಾದ ಲೆಕ್ಕಪತ್ರಗಳನ್ನು ಅದರ ಲೆಕ್ಕಪರಿಶೋಧನಾ ವರದಿಯೊಂದಿಗೆ ವರ್ಷೇ ವರ್ಷೇ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**15. ವಾರ್ಷಿಕ ವರದಿ.-**ಪ್ರಾಧಿಕಾರವು, ವರ್ಷದ ಕಾರ್ಯಕಲಾಪಗಳ ವರದಿಯನ್ನು ಪ್ರತಿ ವರ್ಷವೂ ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಆ ವರದಿಯನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ದಿನಾಂಕದಂದು ಅಥವಾ ಅದಕ್ಕೂ ಮೊದಲೇ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನ ಮಂಡಲದಪ್ರತಿಯೊಂದು ಸದನದ ಮುಂದೆ ಇರಿಸುವಂತೆ ಮಾಡತಕ್ಕದ್ದು.

## ಅಧ್ಯಾಯ IV
## ದಂಡಗಳು

**16. ದಂಡಗಳು.-**(1) ಸ್ವತಃ ತಾನಾಗಿಯೇ ಆಗಲೀ ಅಥವಾ ಸೂಕ್ತ ಪ್ರಾಧಿಕಾರವಿಲ್ಲದೆಯೇಮೀನುಗಾರಿಕೆ ಬಂದರು ಸರಹದ್ದು ವ್ಯಾಪ್ತಿಯೊಳಗಿನ ಭೂಮಿಗಳು, ಸ್ಥಾಪನೆಗಳು ಮತ್ತು ಯಂತ್ರೋಪಕರಣಗಳಿಗೆ ಹಾನಿಯುಂಟುಮಾಡುವ ಯಾವೊಬ್ಬ ವ್ಯಕ್ತಿಯು, ದೋಷಸಿದ್ಧಿಯ ಅನಂತರ, ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮವನ್ನು ಯಾವೊಬ್ಬ ವ್ಯಕ್ತಿಯು ಉಲ್ಲಂಘಿಸಿದ್ದು, ಅಂಥ ಉಲ್ಲಂಘನೆಗೆ ಯಾವುದೇ ದಂಡವನ್ನು ವಿಧಿಸಲು ಉಪಬಂಧಿಸದಿದ್ದರೆ ಅವನು ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**17. ಅಪರಾಧಗಳ ದುಷ್ಪ್ರೇರಣೆ.-**ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ದುಷ್ಪ್ರೇರಿಸುವ ಅಥವಾ ಯಾವುದೇ ಅಂಥ ಅಪರಾಧವನ್ನು ಮಾಡಲು ಯತ್ನಿಸುವ ಯಾವೊಬ್ಬ ವ್ಯಕ್ತಿಯು, ಅಂಥ ಅಪರಾಧ ಮಾಡಿದುದಕ್ಕೆ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಲಾಗುವ ದಂಡನೆಯಿಂದ ದಂಡಿತನಾಗತಕ್ಕದ್ದು.

**18.ಪ್ರತಿಷೇಧಿತವಲ್ಲದ ಇತರ ಕಾನೂನುಗಳ ಅಡಿಯಲ್ಲಿ ಶಿಕ್ಷೆ.-**ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಕೃತ್ಯ ಅಥವಾ ಲೋಪಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ಅಭಿಯೋಜನೆಗೆ ಒಳಪಡಿಸುವುದನ್ನು ಮತ್ತು ದಂಡನೆಗೆ ಗುರಿಪಡಿಸುವುದನ್ನು ಈ ಅಧಿನಿಯಮದಲ್ಲಿರುವ ಯಾವುದೂ, ಅಡ್ಡಿಪಡಿಸತಕ್ಕದ್ದಲ್ಲ :

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಅದೇ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚು ಬಾರಿ ಅಭಿಯೋಜನೆಗೆ ಒಳಪಡಿಸತಕ್ಕದ್ದಲ್ಲ ಮತ್ತು ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

**19. ಅಪರಾಧಗಳ ರಾಜಿ.-**(1) ಪ್ರಾಧಿಕಾರದಿಂದ ಪ್ರಾಧಿಕೃತನಾದ ಯಾವೊಬ್ಬ ಅಧಿಕಾರಿಯು, ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಶಿಕ್ಷಾರ್ಹವಾದ ಒಂದು ಅಪರಾಧವನ್ನು ಮಾಡಿರುವ ಅಥವಾ ಅಂಥ ಅಪರಾಧ ಮಾಡಿರುವನೆಂದು ಯುಕ್ತವಾಗಿ ಊಹಿಸಬಹುದಾದಂಥ ವ್ಯಕ್ತಿಯಿಂದ ಅಂಥ ಅಪರಾಧಕ್ಕಾಗಿ ರಾಜಿಯ ರೂಪದಲ್ಲಿ ಐದುನೂರು ರೂಪಾಯಿಗಳನ್ನು ಮೀರದ ಹಣವನ್ನು ಸ್ವೀಕರಿಸಬಹುದು.

(2) ಅಂಥ ಹಣವನ್ನು ಸಂದಾಯ ಮಾಡಿದ ಮೇಲೆ ಅಭಿರಕ್ಷೆಯಲ್ಲಿರುವ ಸದರಿ ವ್ಯಕ್ತಿಯನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಹಾಗೆ ರಾಜಿ ಮಾಡಿಕೊಂಡಂಥ ಅಪರಾಧದ ಸಂಬಂಧದಲ್ಲಿ ಅವನ ವಿರುಧ್ಧವಾಗಿ ಯಾವುದೇ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**20. ಮೀನುಗಾರಿಕೆ ಬಂದರು ಸರಹದ್ದಿನಲ್ಲಿ ಅಪರಾಧವೆಸಗುವ ವ್ಯಕ್ತಿಯನ್ನು ಹೊರದೂಡುವ ಮತ್ತು ಅಭಿರಕ್ಷೆಗೆ ತೆಗೆದುಕೊಳ್ಳುವ ಅಧಿಕಾರ.-** ಯಾವುದೇ ಮೀನುಗಾರಿಕೆ ಬಂದರು ಸರಹದ್ದಿನ ಪ್ರಭಾರದಲ್ಲಿರುವ ಅಥವಾ ಅದರ ಉದ್ಯೋಗದಲ್ಲಿರುವ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಿಯು ತನ್ನ ದೃಷ್ಟಿಯಲ್ಲಿ, ಯಾವೊಬ್ಬ ವ್ಯಕ್ತಿಯು, -

(ಎ) ಯಾವುದೇ ಕಟ್ಟಡ, ಸ್ಥಾಪನೆ, ಸಲಕರಣೆ ಅಥವಾ ವಾಹನಕ್ಕೆ ಉದ್ದೇಶ ಪೂರ್ವಕವಾಗಿ ಯಾವುದೇ ಹಾನಿಯನ್ನುಂಟು ಮಾಡಿದರೆ ; ಅಥವಾ

(ಬಿ) ಮೀನುಗಾರಿಕೆ ಬಂದರು ಸರಹದ್ದಿನೊಳಗೆ ಯಾವುವೇ ಕಾರ್ಯಚಟುವಟಿಕೆಗಳಲ್ಲಿ ಸೂಕ್ತ ಪ್ರಾಧಿಕಾರವಿಲ್ಲದೆ ಹಸ್ತಕ್ಷೇಪ ಮಾಡಿದರೆ,

-ಅಂಥ ವ್ಯಕ್ತಿಯನ್ನು ಅಂಥಪ್ರದೇಶದಿಂದ ಹೊರದೂಡಬಹುದು ಅಥವಾ ವಾರೆಂಟ್ ಇಲ್ಲದೆ ಅಭಿರಕ್ಷೆಗೆ ತೆಗೆದುಕೊಂಡು ಆ ಕೂಡಲೇ ಹತ್ತಿರದ ಪೊಲೀಸ್ ಠಾಣೆಯಪ್ರಭಾರದಲ್ಲಿರುವ ಪೊಲೀಸ್ ಅಧಿಕಾರಿಗೆ ಒಪ್ಪಿಸಬಹುದು:

ಪರಂತು, ಹಾಗೆ ಅಭಿರಕ್ಷಗೆ ತೆಗೆದುಕೊಳ್ಳಲಾದಂಥ ಪ್ರತಿಯೊಬ್ಬ ವ್ಯಕ್ತಿಯನ್ನು ಬಂಧನದ ಸ್ಥಳದಿಂದ

ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಪ್ರಯಾಣ ಮಾಡಲು ಅವಶ್ಯಕವಾದ ವೇಳೆಯೂ ಸೇರಿದಂತೆ, ಹಾಗೆ ಅಭಿರಕ್ಷೆಗೆ ತೆಗೆದುಕೊಂಡಾಗಿನಿಂದ ಇಪ್ಪತ್ನಾಲ್ಕು ಗಂಟೆಗಳ ಅವಧಿಯೊಳಗಾಗಿ ಹತ್ತಿರದ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ಯಾವೊಬ್ಬ ವ್ಯಕ್ತಿಯನ್ನು, ಮ್ಯಾಜಿಸ್ಟ್ರೇಟರ ಪ್ರಾಧಿಕಾರವಿಲ್ಲದೆ ಸದರಿ ಅವಧಿಗೆ ಮೀರಿ ಅಭಿರಕ್ಷೆಯಲ್ಲಿ ಇರಿಸತಕ್ಕದ್ದಲ್ಲ.

## ಅಧ್ಯಾಯ V
## ಸಂಕೀರ್ಣ

**21. ಲೋಕ ನೌಕರರಾಗಿ ಪ್ರಾಧಿಕಾರದ ಸದಸ್ಯರು ಮತ್ತು ಸಿಬ್ಬಂದಿ ವರ್ಗ.-** ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಪ್ರಾಧಿಕಾರದ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸಲು ಉದ್ದೇಶಿಸಿರುವಾಗ ಅವರನ್ನು ಭಾರತ ದಂಡ ಸಂಹಿತೆ, 1860 (ಕೇಂದ್ರಾಧಿನಿಯಮ 1860ರ 45)ರ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**22. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಆಶಿಸಿರುವ ಅಥವಾ ಉದ್ದೇಶಿಸಲಾದ ಯಾವುದೇ ಕೃತ್ಯದ ಬಗ್ಗೆ ರಾಜ್ಯ ಸರ್ಕಾರ, ಪ್ರಾಧಿಕಾರ ಅಥವಾ

ಪ್ರಾಧಿಕಾರದ ಅಧ್ಯಕ್ಷರು ಅಥವಾ ಇತರ ಸದಸ್ಯರು ಅಥವಾ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ದ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**23. ಭೂ ಕಂದಾಯದ ಬಾಕಿಯಂತೆ ಬಾಕಿಗಳ ವಸೂಲಿ.-** ಪ್ರಾಧಿಕಾರಕ್ಕೆ ಯಾವುದೇ ಮೊತ್ತವು ಬಾಕಿಯಿದ್ದು ಅಂಥ ಸಂದಾಯಕ್ಕಾಗಿ ನಿಯಮಿಸಲಾದ ಕಾಲದೊಳಗೆ ಆ ಮೊತ್ತವು ಸಂದಾಯವಾಗದಿದ್ದಾಗಲೆಲ್ಲ, ಅದನ್ನು ನಿಯಮಿಸಬಹುದಾದಂಥ ದರಗಳಲ್ಲಿ ಬಡ್ಡಿಯೊಂದಿಗೆ ಭೂಕಂದಾಯದ ಬಾಕಿಗಳನ್ನು ವಸೂಲು ಮಾಡುವ ರೀತಿಯಲ್ಲೇ ವಸೂಲಿ ಮಾಡತಕ್ಕದ್ದು.

**24. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ಘಟಿಸಿದ ಕಾಲದಲ್ಲಿ ಅದರ ವ್ಯವಹಾರಗಳ ನಿರ್ವಹಣೆಯಪ್ರಭಾರದಲ್ಲಿದ್ದ ಹಾಗೂ ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಹಾಗೂ ಕಂಪನಿಯನ್ನು ಅಪರಾಧಗಳ ದೋಷಿಯೆಂದು ಭಾವಿಸತಕ್ಕದ್ದು ; ಮತ್ತು ತನ್ನ

ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಬದ್ಧವಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತವಾಗತಕ್ಕದ್ದು :

ಪರಂತು, ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಎಲ್ಲ ರೀತಿಯ ಯೋಗ್ಯ ಶ್ರದ್ಧೆಯನ್ನು ವಹಿಸಿದ್ದನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತು ಪಡಿಸಿದರೆ ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಬದ್ಧನಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿಯ ಒಂದು ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ರುಜುವಾತಾದರೂ ಸಹ ಆ ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗಲು

ಬದ್ಧವಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತವಾಗತಕ್ಕದ್ದು ;

**ವಿವರಣೆ: -** ಈಪ್ರಕರಣದ ಉದ್ದೇಶಗಳಿಗಾಗಿ, -

(ಎ) `` ಕಂಪನಿ '' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ `` ನಿರ್ದೇಶಕ '' ಎಂದರೆ, ಫರ್ಮಿನ ಒಬ್ಬ ಪಾಲುದಾರ.

**25. ಡೆಪ್ಯುಟಿ ಕಮೀಷನರಿಗೆ ಅಪೀಲು.-** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ತನಗೆ ಆದೇಶವು ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಡೆಪ್ಯೂಟಿ ಕಮೀಷನರಿಗೆ ಅಪೀಲು ಸಲ್ಲಿಸಬಹುದು :

ಪರಂತು, (1) ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ಅವಧಿಯ ನಂತರ ಸಲ್ಲಿಸಲಾದ ಅಪೀಲನ್ನು, ಆ ಅವಧಿಯ ಒಳಗೆ ಸಲ್ಲಿಸದೆ ಇರಲು ಅಪೀಲುದಾರನಿಗೆ ಸಾಕಷ್ಟು ಕಾರಣಗಳು ಇದ್ದುವೆಂದು ಡೆಪ್ಯುಟಿ ಕಮೀಷನರಿಗೆ ಮನದಟ್ಟಾದರೆ, ಅಪೀಲನ್ನು ಅಂಗೀಕರಿಸಬಹುದು.

(2) ಡೆಪ್ಯುಟಿ ಕಮೀಷನರ್, ನಿಯಮಿಸಲಾದ ರೀತಿಯಲ್ಲಿ ಅಪೀಲನ್ನು ವಿಲೆ ಮಾಡತಕ್ಕದ್ದು ಮತ್ತು ಅವರು ಹೊರಡಿಸಿದ ಆದೇಶವು ಅಂತಿಮವಾಗಿರತಕ್ಕದ್ದು.

**26. ಪರಿಷ್ಕರಣೆ.-** 25ನೇಪ್ರಕರಣದ ಅಡಿಯಲ್ಲಿ ಯಾವುದೇ ಅಪೀಲನ್ನು ಸಲ್ಲಿಸದಿದ್ದಾಗ, ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ತಾನೇ ಸ್ವತಃ ಅಥವಾ ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯು ನಿಯಮಿತ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಿದಾಗ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಯು ಹೊರಡಿಸಿದ ಯಾವುದೇ ತೀರ್ಮಾನ ಅಥವಾ ಆದೇಶ ಅಥವಾ ಕೈಗೊಂಡ ವ್ಯವಹರಣೆಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಅಂಥ ತೀರ್ಮಾನ, ಆದೇಶ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆ, ಔಚಿತ್ಯ, ಅಥವಾ ಅಕ್ರಮತೆಗೆ ಸಂಬಂಧಪಟ್ಟಂತೆ, ಮನದಟ್ಟು ಮಾಡಿಕೊಳ್ಳುವ ಉದ್ದೇಶಗಳಿಗಾಗಿ ತರಿಸಿಕೊಂಡು ಪರೀಕ್ಷಿಸಬಹುದು ಹಾಗೂ ಯಾವುದೇ ಸಂದರ್ಭದಲ್ಲಿ, ಯಾವುದೇ ತೀರ್ಮಾನವನ್ನು ಮಾರ್ಪಾಟುಗೊಳಿಸಬೇಕೆಂದು, ರದ್ದುಗೊಳಿಸಬೇಕೆಂದು, ಪರಿಷ್ಕರಿಸಬೇಕೆಂದು ಅಥವಾ ಪುನರಾಲೋಚನೆಗಾಗಿ ಸಲ್ಲಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ, ತಾನು ಉಚಿತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಗೆ ಮನವಿ ಸಲ್ಲಿಸಲು ಅವಕಾಶ ನೀಡಿದ ಹೊರತು, ಅವನಿಗೆ ಪ್ರತಿಕೂಲವಾಗಿ ಬಾಧಕವುಂಟಾಗುವಂಥ ಯಾವ ಆದೇಶಗಳನ್ನು ಹೊರಡಿಸಿತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಒಳಪಟ್ಟು ರಾಜ್ಯ

ಸರ್ಕಾರವು ಯಾವುದೇ ಅಂಥ ತೀರ್ಮಾನ, ಆದೇಶ ಅಥವಾ ವ್ಯವಹರಣೆಗಳ ಕಾರ್ಯಾಚರಣೆಯನ್ನು ತಡೆಯಬಹುದು.

**27. ವಿನಿಯಮಗಳು.-** ಪ್ರಾಧಿಕಾರವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಪೂರ್ವ ಪ್ರಕಟಣೆಯ ನಂತರ, ಅಧಿಸೂಚನೆಯ ಮೂಲಕ ಈ ನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನಿರ್ವಹಿಸಲು ಈ ಅಧಿನಿಯಮದ ಉಪಬಂಧಗಳು ಹಾಗೂ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸಬಹುದು.

**28. ರಾಜ್ಯ ಸರ್ಕಾರದಿಂದ ಸೂಚನೆಗಳು.-** ಪ್ರಾಧಿಕಾರವು ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ, ಅದಕ್ಕೆ ರಾಜ್ಯ ಸರ್ಕಾರವು ನೀಡಬಹುದಾದ ಈ ಅಧಿನಿಯಮಕ್ಕೆ ಅಸಂಗತವಲ್ಲದಂಥ ನಿರ್ದೇಶನಗಳು ಮತ್ತು ಸೂಚನೆಗಳ ಮೂಲಕ ಮಾರ್ಗದರ್ಶನ ಹೊಂದತಕ್ಕದ್ದು.

**29. ಉಳಿಸುವಿಕೆಗಳು.-** ಈ ಅಧಿನಿಯಮದಲ್ಲಿ ಇರುವುದಾವುದೂ, ಕ್ಷೇತ್ರೀಯ ಸಮುದ್ರದಾಚೆಯಲ್ಲಿ ಮೀನು ಹಿಡಿಯುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**30. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ, ಮತ್ತು ಪೂರ್ವಪ್ರಕಟಣೆಯ ಷರತ್ತಿಗೆ ಒಳಪಟ್ಟು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಆಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ತರುವಾಯ, ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿದ್ದರೆ, ಸಾಧ್ಯವಾದಷ್ಟು ಬೇಗನೆ ಅದರ ಮುಂದೆ ಮತ್ತು ಅದು ಅಧಿವೇಶನದಲ್ಲಿಲ್ಲದಿದ್ದರೆ, ನಿಕಟೋತ್ತರದ ಅಧಿವೇಶನದಲ್ಲಿ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ತದನಂತರ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಅಧಿಸೂಚಿತವಾದ ದಿನಾಂಕದಿಂದ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ಅಥವಾ ರದ್ದಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ವಿಷಯದ ವಿಧಿಮಾನ್ಯತೆಗೆ ಪ್ರತಿಕೂಲವಾಗಿರತಕ್ಕದ್ದಲ್ಲ.

* * * *